# ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಮಣಿಕಂಠ ಕಸ್ತೂರಿ ಕೊರಳಿಗೆ ಆಕ್ಸಫರ್ಡ ಮ್ಯಾಟಸರ್ ಅವಾರ್ಡ ಜೊತೆಗೆ 50 ಸಾವಿರ ನಗದು ಬಹುಮಾನ ಪುರಸ್ಕಾರ



ಕನ್ನಡ ಜನಶ್ರೀ ಸುದ್ದಿ ಜಾಲ

ಗದಗ: ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳು ದತ್ತುಪಡೆದ ಗದಗ ಶಹರದ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಮಣಿಕಂಠ ಕಸ್ತೂರಿ ಕೊರಳಿಗೆ ಆಕ್ಸಫರ್ಡ ಮ್ಯಾಟಸರ್ ಅವಾರ್ಡ ಜೊತೆಗೆ 50 ಸಾವಿರ ನಗದು ಬಹುಮಾನ ಪುರಸ್ಕಾರ ಪಡೆಯುವುದರ ಜೊತೆ- ಗೆ ಶಾಲೆಯ ಕೀರ್ತಿ ಹೆಚ್ಚಿಸಿದ್ದಾನೆಂದು ಶಿಕ್ಷಕಿಯರಾದ ಶ್ರೀಮತಿ ಜಯಲಕ್ಷ್ಮೀ ಅಣ್ಣಿಗೇರಿ ತಿಳಿಸಿದ್ದಾರೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟದ ಆಕ್ಸಫರ್ಡ ಪಾಟೀಲ್ಸ್ ಸಂಸ್ಥೆಯವರು ಪ್ರತಿವರ್ಷ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಆಂಗ್ಲ, ವಿಜ್ಞಾನ ಮತ್ತು ಗಣಿತ ವಿಷಯಗಳ ಕುರಿತು ಸ್ಪರ್ಧೆ ಏರ್ಪಡಿಸಿ ಆಕ್ಸಫರ್ಡ ಮ್ಯಾಟಸರ್ ಅವಾರ್ಡ ಜೊತೆಗೆ ನಗದು ಪುರಸ್ಕಾರ ನೀಡುವ ಪರಂಪರೆಯನ್ನು ಹುಟ್ಟು ಹಾಕಿದ್ದಾರೆ. ಕಳೆದ ರವಿವಾರ ಗದಗಿನ ಮಾಡೆಲ್ ಹೈಸ್ಕೂಲ್‌ನಲ್ಲಿ ರಾಜ್ಯಮಟ್ಟದ ಸ್ಪರ್ಧೆಯನ್ನು ಏರ್ಪಡಿಸಿದ್ದರು. ರಾಜ್ಯದಾದ್ಯಂತ 3000 ಕ್ಕೂ ಹೆಚ್ಚುವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಯಾದ ಮಣಿಕಂಠ ಕಸ್ತೂರಿ ಪ್ರಥಮ ಸ್ಥಾನ ಪಡೆಯುವುದರ ಜೊತೆಗೆ 50 ಸಾವಿರ ನಗದು ಪಡೆದಿದ್ದಾನೆ.

ಸಾಧಕ ವಿದ್ಯಾರ್ಥಿ ಮಣಿಕಂಠ ಕಸ್ತೂರಿಗೆ ಹಾಗೂ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸಿದ ಕುಮಾರಿ ರಾಧಿಕಾ ಮೊರಬ ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾದ ನಿಮಿತ್ತ ಶಾಲೆಯ ವತಿಯಿಂದ ಈರ್ವರೂ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.

ಸನ್ಮಾನ ಸಮಾರಂಭದಲ್ಲಿಮುಖ್ಯ ಅತಿಥಿಗಳಾಗಿ ಬಾಗವಹಿಸಿದ ಡಾ.ಬಸವರಾಜ ಧಾರವಾಡ ಮಾತನಾಡಿ ಸಭಾಪತಿ ಬಸವರಾಜ ಹೊರಟ್ಟಿಯವರು ಈ ಶಾಲೆಯನ್ನು ದತ್ತುಪಡೆದ ಮೇಲೆ ಶಾಲೆಗೆ ಹೆಚ್ಚಿನ ಕಳೆ ಬಂದಿದೆ. ಜೊತೆಗೆ ಕಲಿಕೆಗೆ ಪೂರಕವಾದ ಉತ್ಕೃಷ್ಟ ವಾತಾವರಣ ಶಾಲಾ ಆವರಣದಲ್ಲಿ ಮೂಡಿದೆ. ಅದರ ಪರಿಣಾಮದಿಂದಾಗಿ ಜಿಲ್ಲೆಯಲ್ಲಿಯೇ ಒಂದು ಮಾದರಿ ಶಾಲೆಯಾಗಿ ಹೊರ ಹೊಮ್ಮುವುದರ ಜೊತೆಗೆ ಇಲ್ಲಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚೆಚ್ಚು ತಮ್ಮ ಪ್ರತಿಭೆಯನ್ನು ತೋರಿಸಿ ಸಾಧನೆ ಮಾಡುತ್ತಿರುವುದು ಈ ಶಾಲೆಯ ಕೀರ್ತಿಯನ್ನು ಬೆಳಗಿಸುತ್ತಿದ್ದಾರೆ. ಈ ಶಾಲೆ ಇನ್ನೂ ಉತ್ತರೋತ್ತರವಾಗಿ ಅಭಿವೃದ್ಧಿಪಡಿಸುವುದರ ಜೊತೆಗೆ ರಾಜ್ಯದಲ್ಲಿಯೇ ಒಂದು ಮಾದರಿ ಶಾಲೆಯನ್ನಾಗಿ ಕಟ್ಟುವ ಸಂಕಲ್ಪವನ್ನು ಬಸವರಾಜ ಹೊರಟ್ಟಿಯವರು ಮಾಡಿದ್ದಾರೆಂದು ಹೇಳಿ ಈರ್ವರೂ ಸಾಧಕ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀಮತಿ. ಪಾರ್ವತಿ .ವಸ್ತ್ರದ ಶಿಕ್ಷಕಿಯರಾದ ಶ್ರೀಮತಿ .ಜಯಲಕ್ಷ್ಮಿ ಅಣ್ಣಿಗೇರಿ, ಶಿಕ್ಷಕರಾದ ಶ್ರೀ ಎಂ ಐ ಶಿವನಗೌಡ, ಶ್ರೀ ರಮೇಶ್ .ಬಸರಿ ,ಶ್ರೀ ನಾಗಪ್ಪ ಶಿರೋಳ್, ಶಿಕ್ಷಕಿಯರಾದ ಶ್ರೀಮತಿ ಶಂಕ್ರಮ್ಮ ಹನುಮಗೌಡ, ಶ್ರೀಮತಿ ಸಂಜೀವಿನಿ ಕೊಲಗುಡಿ ,ಶ್ರೀಮತಿ ಶೋಭಾ ಗಾಳಿ, ಶ್ರೀಮತಿ ಶಶಿಕಲಾ ಗುಳೇದವರ್, ಶ್ರೀಮತಿ ಮಂಜುಳಾ ಸಾಮ್ರಾಣಿ ,ಶ್ರೀಮತಿ ಸುಮಂಗಲ ಪತ್ತಾರ್, ಶ್ರೀಮತಿ ಸಾವಿತ್ರಿ ಗದ್ದನಕೇರಿ ,ಶ್ರೀಮತಿ ಶಾರದಾ ಬಾಣದ್, ಶ್ರೀಮತಿ ಎಸ್ ಯು ಕುಷ್ಟಗಿ ,ಶ್ರೀಮತಿ ಪದ್ಮಾವತಿ ದಾಸರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.